ಮುಟ್ಟಿನ ಸ್ನಾಲೆ ಹೊತ್ತು ಹೋಗಲು ಅಗಸಗಿತ್ತಿ ಬಂದಳು. ಇತ್ತ ಬರುವುದನ್ನು ವನಜಾಕ್ಷಿಯ ಅಜ್ಜಿ ಕೆಂಪಮ್ಮ ತಡೆದು ನಿಲ್ಲಿಸಿ, 'ಲೇ ತಾಯಿ ನನ್ನ ಸೊಸೆಗೆ ಈಗ ಮುಟ್ಟು ನಿಂತದೆ. ಇನ್ನೂ ಮುಂದೆ ನಮ್ಮ ಹಟ್ಟಿ ಮುಂದೆ ಬರಬೇಡ' ಗದರಿಕೊಂಡಳು. ಆದರೂ ಅಗಸಗಿತ್ತಿ, 'ನಿನ್ನ ಸೊಸೇನೇ ಬರ ಹೇಳವಳೇ, ಇಲ್ಲಾಂದ್ರೆ ನಾನ್ಯಾಕ್ ಬರನೇ, ಸೂಲು ನಿಂತ್ರೆ ಒಳ್ಳೆದಲ್ವಾ' ಖಡಕ್ಕಾಗಿ ಹೇಳಿದಳು. ವನಜಾಕ್ಷಿ ಮುಟ್ಟಿನ ಸೀರೆ ಕಳಚಿ ಮುದ್ದೆ ಕಟ್ಟಿದ್ದಳು. ದಿನ ಹಿಂದಿದ್ದ ಗಂಟಿಗೆ ಅಗಸಗಿತ್ತಿ ಕೋಲು ಸಿಕ್ಕಿಸಿಕೊಂಡು ಎತ್ತಿಕೊಂಡಳು.

ಕೆಂಪಮ್ಮನ ಕಣ್ಣು ಕೆಂಪಾದವು. ಇಷ್ಟಾದರೂ ವನಜಾಕ್ಷಿಗೆ ಬೇಸರವೇನೂ ಆಗಲಿಲ್ಲ, ಆಗಿರುವುದು ಕೆಂಪಮ್ಮನಿಗೆ, ಮದುವೆಯಾಗಿ ಇಷ್ಟು ದಿವಸವಾದರೂ ಒಂದು ಕೂಸು ಬರಲಿಲ್ಲವಲ್ಲ, ಆ ದೇವರಿಗೂ ಕಣ್ಣುಕುರುಡೇ, 'ನಾನು ಕಣ್ಣುಮುಚ್ಚುವ ಮೊದ್ಲು ಕತ್ತಲ ಮನೆಗೆ ಬೆಳಕು ಕೊಡು ತಂದೆ' ಆಕಾಶ ನೋಡಿ ಹರಕೆ ಹೊತ್ತಿದ್ದಳು. ಇದೇ ಹೊತ್ತಿಗೆ ನರ್ಸಮ್ಮ ಹಟ್ಟಿ ಮುಂದೆ ಹಾದು ಹೋದಳು. ಅವಳನ್ನು ಕಂಡ ಕೆಂಪಮ್ಮ, 'ದೇವರು ಬಂದ ಹಾಗೆ ಬಂದ್ರಿ ನರ್ಸಮ್ಮ' ಎಂದು ಕೈಮುಗಿದು ನಡಹಟ್ಟಿಯಲ್ಲಿ ಮಂದಲಿಗೆ ಹಾಸಿ ಕೂರಿಸಿದಳು.

* * *

ಇಷ್ಟು ದಿವಸ ಇದೇ ಹಾದಿಯಲ್ಲಿ ನರ್ಸಮ್ಮ ಹಾದು ಹೋಗುತ್ತಿದ್ದವಳು, 'ನಿಮ್ಮ ಮನೆಯಲ್ಲಿ ಬಸುರಿಯರು, ಬಾಣಂತಿ, ಮಕ್ಕಳುಮರಿಗಳು ಇದ್ದಾರಾ?' ಎಂದು ಕೇಳಿದಾಗ ಕೆಂಪಮ್ಮ ಗಡಸು ಮುಖದಿಂದ, 'ಈವಮ್ಮನಿಗೆ ಇನ್ನೇನೂ ಕೇಮೆ, ಜ್ವರ ಬಂದಿದ್ದತ್ತಾ, ಮಕ್ಕಳಿದ್ದಾವಾ? ಬಸುರಿಯರಿದ್ದಾರಾ? ಅಂತ ಕೇಳೋದಕ್ಕೆ ಸರ್ಕಾರ ಸಂಬಳ ಕೊಟ್ಟದೆ ಅನ್ನಿ' ಎನ್ನುತ್ತಾ ಮುಖ ಮುರಿದಿದ್ದಳು. ನಮ್ಮಟ್ಟಿಯಲ್ಲಿ ಯಾವ ಕಾಯಿಲೆ ಮನುಷ್ಯರು ಇಲ್ಲ ಎಂದು ರೇಗುತ್ತಿದ್ದವಳು. ಈಗ ಇಷ್ಟೊಂದು ಮರ್ಯಾದೆಯಿಂದ ಮಂದಲಿಗೆ ಹಾಸಿ ಕೂರಿಸುವುದರಲ್ಲಿ ಏನೋ ನಿಗೂಢವಿದೆ ಅನ್ನಿಸಿ ನರ್ಸ್ ರುಕ್ಮಿಣಿಯಮ್ಮ, ಕೆಂಪಮ್ಮನ ಈ ಹೊತ್ತಿನ ವರ್ತನೆ ಗಮನಿಸಿದಳು.

ನರ್ಸಮ್ಮನನ್ನು ಒಂದಷ್ಟು ಹೊತ್ತು ಕೂರಿಸಿಕೊಂಡು ಊರಿನಲ್ಲಿ ಬಸಿರಾದವರು, ಮಕ್ಕಳನ್ನು ಹೆತ್ತವರನ್ನು ವಿಚಾರಿಸಿ, 'ಇವಳಿಗಿಂತ ಚಿಕ್ಕ ಹೆಣ್ಣುಮಕ್ಕಳಿಗೆಲ್ಲ ಕಣ್ಣುಬಿಟ್ಟ ದೇವರು. ನಮ್ಮ ವನಜಾಕ್ಷಿ ಏನ್ ಪಾಪ ಮಾಡಿದ್ದಳು?' ಎಂದು ದೇವರನ್ನು ಪ್ರಶ್ನಿಸಿದಳು. 'ತನ್ನ ಮೊಮ್ಮಗನ ಹೆಂಡತಿ ವನಜಾಕ್ಷಿಗೆ ಸರಿಯಾಗಿ ಮುಟ್ಟು ನಿಲ್ಲುತ್ತಿಲ್ಲ. ಅದಕ್ಕೆ ನಾಟಿವೈದ್ಯ ಮಾಡಿ ಆಯ್ತು. ನಿಮ್ಗೆ ಗೊತ್ತಿರುವಂಗೆ ದೊಡ್ಡಾಸ್ಪತ್ರೇಲಿ ಒಳ್ಳೆ ಡಾಕ್ಟರಿದ್ದರೆ ಕರ್‍ಕೊಂಡೋಗಿ ತೋರ್‍ಸಿ. ನಿಮ್ಮ ಪಾದ ಕಟ್ಕತ್ತೀನಿ. ಏನೋ ನಿಮ್ಮ ಕಾಲ್ದಸಿಯಿಂದ ಒಂದು ಮನೆಕಾಲ ಬೆಳಗಲಿ' ಎಂದು ಬೇಡಿಕೊಂಡಳು.

* * *

ಅಷ್ಟರಲ್ಲಿ ಊರ ಮುಂದೆ ತಮಟೆ ಸದ್ದು. 'ಹೋದ್ವೆ ವರ್ಸ ಬರ ಬಂದು ಬೆಳೆ ಒಣಗಿತ್ತು. ಬೆಳೆ ಕಳೆದುಕೊಂಡವರಿಗೆ ಪರಿಹಾರ ಕೊಡಲು ಊರ ಮುಂದೆ ಸಭೆ ನಡೀತದಂತೆ ಕನ್ರಪ್ಪೋ. ದಯಮಾಡಿ ಸಂತ್ರಸ್ತರು ಒಂದ್ಕಡೆ ಸೇರಬೇಕಂತೆ ಕನ್ರಪ್ಪೋ' ತೋಟಿ ಸಾರಿದನು. ಸಾರಾಣಿಕೆ ಏನೆಂದು ಕೇಳಿಸಿಕೊಂಡ ರಾಜಶೇಖರ, 'ಅಜ್ಜಿ ನಾನು ಸಭೆಗೆ ಹೋಯ್ತಿನಿ, ಬೆಳೆ ಪರಿಹಾರ ಕೊಟ್ಟರಂತೆ' ಎಂದನು. ಹೋದ್ವೆ ವರ್ಸದ ಬರಕ್ಕೆ ಪರಿಹಾರ ಕೊಡುದಾದ್ರೆ ಈಗ ಕಳಪೆಬೀಜ ಕೊಟ್ಟು ಬೆಳೆ ಹಾಳಾಗದಲ್ಲ, ಅದಕೆ ಯಾರು ಕೊಟ್ಟಾರು?' ಎಂದು ಅಧಿಕಾರಿಗಳ ಪ್ರಶ್ನಿಸುವಂತೆ ಏರುದನಿಯಲ್ಲಿ ಹೇಳಿದಳು.

ಅಜ್ಜಿ ಮಾತಿಗೆ ಸ್ಪಂದಿಸಿದ ರಾಜಶೇಖರ 'ಹೋದ್ವೆ ವರ್ಸದ ಬರಕ್ಕೆ ಈ ವರ್ಸ ಪರಿಹಾರ ಕೊಡ್ತಾವರೇ, ಕಳಪೆ ಬೀಜದ ನಷ್ಟಕ್ಕೆ ಮುದ್ದೋರ್ಸಕ್ಕೆ ಕೊಟ್ಟರೆ ಕನಬುಡು' ಎಂದ. ಅವನ ಮಾತಿಗೆ ಸಿಟ್ಟಿಗೆದ್ದ ಕೆಂಪಮ್ಮ 'ಥೂ ಹಾಳ್‌ಮನೆ ಸರ್ಕಾರಕ್ಕೆ ಬೆಂಕಿ ಹಾಕ್ತು. ರೈತರ ಹೊಟ್ಟೆ ಮೇಲೆ ತಣ್ಣೀರ್ ಬಟ್ಟೆ ಹಾಕಿದ್ರೆ ಉದ್ಧಾರಾದರಾ, ಓಟಾಕಿಸ್ಕಳುಕೆ ಮನೆತಕ್ಕೆ ಹೊತ್ತಲ್ಲದ ಹೊತ್ತಲ್ಲಿ ಬತ್ತರೆ' ಬಾಯಿ ತುಂಬಾ ತುಂಬಿದ ಕಡ್ಡಿಪುಡಿ, ಅಡಕೆ, ಎಲೆ ರಸವನ್ನು ಪಿಚಕ್ಕನೆ ಉಗಿದಳು. ಸರ್ಕಾರ ಮತ್ತು ಸ್ಥಳೀಯ ಪುಡಾರಿಗಳನ್ನು ಟೀಕಿಸಿದಳು. ಕೆಂಪಮ್ಮನ ಟೀಕೆಟಿಪ್ಪಣಿ ಕೇಳುತ್ತಾ ಕೂರಲಾಗದೆ ನರ್ಸಮ್ಮ ಹೊರಡಲು ಎದ್ದು ನಿಂತಳು. ಆದರೆ ಕೆಂಪಮ್ಮ ಅವಲನ್ನು ಹೋಗಗೊಡದೆ ನಿಲ್ಲಿಸಿಕೊಂಡಳು.